**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS-167/2015** **PW-1**

**ದಿಃ 03.12.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಎಸ್ ಬಿ ವಕೀಲರಿಂದಃ**

**16.** ದಾವಾ ಆಸ್ತಿಗಳು ಒಟ್ಟು ಎಷ್ಟು ಎಕರೆ ಗುಂಟೆಯಲ್ಲಿದೆ ಎಂದರೆ ಸಾಕ್ಷಿಯು 118 ಎಕರೆ ಇರುತ್ತದೆಂದು ನುಡಿಯುತ್ತಾರೆ. ಎಷ್ಟು ಎಕರೆ ಕೆ ಐ ಡಿ ಬಿ ಗೆ ಹೋಗಿರುತ್ತದೆಂದರೆ ಸಾಕ್ಷಿಯು 52 ಎಕರೆ ಚಿಲ್ಲರೆ ಗುಂಟೆ ಹೋಗಿರುತ್ತದೆಂದು ನುಡಿಯುತ್ತಾರೆ. ಎಷ್ಟು ಎಕರೆ ನೀರಾವರಿ ಜಮೀನು ಇರುತ್ತದೆ ಮತ್ತು ಮಳೆಯಾಶ್ರಿತ ಜಮೀನು ಇರುತ್ತದೆಂದರೆ ಸಾಕ್ಷಿಯು ಲೆಕ್ಕ ಹಾಕಿ ಹೇಳಲು ಬರುತ್ತಿಲ್ಲ ಆದರೆ ಗೊತ್ತಿದೆ ಎನ್ನುತ್ತಾರೆ. ಎಲ್ಲವೂ ನೀರಾವರಿ ಜಮೀನು ಇರುತ್ತದೆ. ಸರ್ವೆ ನಂಃ162/1, 162/3 ರಲ್ಲಿ ಅಸಲು ದಾವಾ ನಂಃ77/2017 ಹಾಕಿದ ನಂತರ ಬಸಪ್ಪನವರು ಬೋರೆವಲ್ಲ ಹಾಕಿಸಿರುತ್ತಾರೆಂದರೆ ಸಾಕ್ಷಿಯು ಎಲ್ಲರೂ ಸೇರಿಸಿ ಹಾಕಿಸಿರುತ್ತೇವೆ ಎನ್ನುತ್ತಾರೆ. ತಮ್ಮ ಹೆಸರಿನಲ್ಲಿ ಏನಾದರೂ ಬೋರವೆಲ್ಲ ಹಾಕಿಸಿದ ಬಿಲ್ಲು ಇದೆ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಬೋರವೆಲ್ಲ ಹಾಕಿಸಲು ತಾವು ಆರ್ಥಿಕ ಸಹಾಯ ಮಾಡಿದ ಬಗ್ಗೆ ಯಾವದಾದರೂ ದಾಖಲೆ ಇದೆಯಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಬ್ಲಾಕ ನಂಃ75 ರಲ್ಲಿ ನೀರಾವರಿ ಇದೆ ಎಂದು ತೋರಿಸಲು ನನ್ನ ಬಳಿ ದಾಖಲೆ ಇರುವದಿಲ್ಲ. 9 ಎರೆ ಮತ್ತು 16 ಎಕರೆಯಲಿ ನೀರಾವರಿ ತೋರಿಸಲು ತಮ್ಮ ಬಳಿ ದಾಖಲೆ ಇದೆಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಒಂದೊಂದು ವರ್ಷ ಅತೀ ಹೆಚ್ಚ ಮಳೆ ಯಾಗುತ್ತದೆ ಮತುತ ಕೆಲವು ವರ್ಷ ಅನಾವೃಷ್ಟಿ ಯಾಗುತ್ತದೆಂದು ನುಡಿಯುತ್ತಾರೆ ಆದರೆ ಪೀಕು ತೆಗೆದುಕೊಳ್ಳುತ್ತಿದ್ದರು ಎನ್ನುತ್ತಾರೆ. ನಾನು ಯಾವದೇ ಬೆಳೆ ವಿಮೆಯನ್ನು ತೆಗೆದುಕೊಂಡಿರುವದಿಲ್ಲ. ಬೆಳೆ ವಿಮೆ ಪಡೆದಿಲ್ಲ ಎಂದು ಹೇಳಿ ಪ್ರಮಾಣ ಪತ್ರ ಹಾಕಲು ತಯಾರಿರುತ್ತೇನೆ.

17. ಮೊದಲು ಕಟ್ಟಿ ರವರ ಮನೆಯಲ್ಲಿ 45 ರಿಂದ 50 ಜನ ಇದ್ದರು ಎಂದರೆ ಸರಿ. ಇಷ್ಟು ಜನರನ್ನು ಸಾಕಲು ವಾರಕ್ಕೆ 15 ರಿಂದ 20 ಸಾವಿರ ಆಗುತಿತ್ತು ಎಂದರೆ ಸಾಕ್ಷಿಯು 10 ಸಾವಿರ ಆದರೆ ಹೆಚ್ಚು ಎನ್ನುತ್ತಾರೆ. ವರ್ಷಕ್ಕೆ ಬಟ್ಟೆ ತರಲು ಒಂದು ಲಕ್ಷ ಆಗುತ್ತಿತ್ತು ಎಂದರೇ ಸಾಕ್ಷಿಯು ನನ್ನ ಮತ್ತು ನನ್ನ ಮಕ್ಕಳಿಗೆ ಯಾವದೇ ಬಟ್ಟೆ ಕೊಡಿಸಿಲ್ಲ ಎನ್ನುತ್ತಾರೆ. ಶೇತಿ ಜಮೀನು ಬಿಟ್ಟರೆ ತಮ್ಮ ಗಂಡನಿಗಾಗಲಿ , ಶಂಕ್ರಪ್ಪನಿಗಾಗಲಿ ಹಾಗೂ ಬಸಪ್ಪನಿಗಾಗಲಿ ಯಾವದೇ ಆದಾಯ ಇರಲಿಲ್ಲ ಎಂದರೆ ಸಾಕ್ಷಿಯು ಹೈನುಗಾರಿಕೆ ಮತ್ತು

ಮಾವುನಿಂದ ಉತ್ಪನ್ನ ಇತ್ತು ಎನ್ನುತ್ತಾರೆ. ವಾದ ಪತ್ರದಲ್ಲಿ ಹೈನುಗಾರಿಕೆ ಮತ್ತು ಮಾವುನಿಂದ ಉತ್ಪನ್ನ ಇತ್ತು ಎಂದು ನಾನು ಬರೆಸಿರುವದಿಲ್ಲ. ಅದೇ ರೀತಿಯಾಗಿ ಇವುಗಳಿಂದ ಎಷ್ಟು ಉತ್ಪನ್ನ ಇತ್ತು ಎನ್ನುವದನ್ನು ನಿಖರವಾಗಿ ಬರಸಿಲ್ಲ ಎಂದರೆ ಸರಿ. ಹಾಲು ಯಾರು ಮಾರಾಟ ಮಾಡುತ್ತಿದ್ದರು ಎಂದು ಅಸಲರ್ಜಿಯಲ್ಲಿ ತಿಳಿಸಿಲ್ಲ ಎಂದರೆ ಸರಿ. ಎಷ್ಟು ಉತ್ಪನ್ನ ಇತ್ತು , ಖರ್ಚು ಇತ್ತು ಹಾಗೂ ಎಷ್ಟು ಉಳಿತಾಯ ಇತ್ತು ಎಂಬುದನ್ನು ತಮ್ಮ ಅಸಲರ್ಜಿಯಲ್ಲಿ ತಿಳಿಸಿಲ್ಲ ಎಂದರೆ ಸರಿ.

18. ಸರ್ವೆ ನಂಃ162/1, 162/3 ಬಿಟ್ಟು ಉಳಿದ ಜಮೀನು ಒಣಬೇಸಾಯ ಜಮೀನು ಎಂದರೆ ಸರಿಯಲ್ಲ. ಕಟ್ಟಿ ಯವರ ಕುಟುಂಬದಲ್ಲಿ ಒಟ್ಟು 8 ಜನ ಹೆಣ್ಣು ಮಕ್ಕಳು ಇದ್ದರು. ಅವರನ್ನು ಉತ್ತಮವಾಗಿ ಮದುವೆ ಮಾಡಿಕೊಟ್ಟಿರುತ್ತಾರೆಂದರೆ ಸಾಕ್ಷಿಯು ಅವರ ಮಕ್ಕಳಿಗೆ ಉತ್ತಮವಾಗಿ ಮದುವೆ ಮಾಡಿಕೊಟ್ಟಿದ್ದು ನನ್ನ ಮಕ್ಕಳಿಗೆ ಬಂದಾಗ ಮಾಡಿಕೊಟ್ಟಿಲ್ಲ ಎನ್ನುತ್ತಾರೆ. ನನಗೆ ಇಬ್ಬರು ಹೆಣ್ಣು ಮಕ್ಕಳು. ತಮ್ಮ ಇಬ್ಬರ ಮಕ್ಕಳ ವಿವಾಹಕ್ಕೆ ಎಷ್ಟು ಖರ್ಚುಗಳು ಆಗಿದೆ ಎಂದರೆ ಸಾಕ್ಷಿಯು ಒಬ್ಬಾಕೆ ಮಗಳ ವಿವಾಹಕ್ಕೆ 2 ಲಕ್ಷ ಖರ್ಚು ಆಗಿದ್ದು ಮತ್ತು ಮತ್ತೊಬ್ಬ ಮಗಳ ವಿವಾಹಕ್ಕೆ ಯಾವದೇ ಖರ್ಚು ಆಗಿಲ್ಲ ಎನ್ನುತ್ತಾರೆ. ಆರು ಹೆಸಿಣ್ಣು ಮಕ್ಕಳ ವಿವಾಹಕ್ಕೆ ಸುಮಾರು ತಲಾ 10 ಲಕ್ಷ ಖರ್ಚು ಆಗಿರುತ್ತದೆಂದರೆ ಸಾಕ್ಷಿಯು 5 ತೊಲೆ ಬಂಗಾರವನ್ನು ಕೊಟ್ಟಿರುತ್ತಾರೆ ಹಾಗೂ 10 ಲಕ್ಷ ಖರ್ಚು ಅದಕ್ಕಿಂತ ಕಡಿಮೆ ಅಥವಾ ಹೆಚ್ಚು ಖರ್ಚಾಗಿರಬಹುದು ಎನ್ನುತ್ತಾರೆ. ನಿಮ್ಮ ಇಬ್ಬರು ಹೆಣ್ಣು ಮಕ್ಕಳ ವಿವಾಹವನ್ನು ಮಾಡುವ ಸಮಯದಲ್ಲಿ ತಮ್ಮ ಗಂಡ ಬದುಕಿದ್ದರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಬಸಪ್ಪನೇ ನಿಂತು ಮಾಡಿರುತ್ತಾರೆಂದರೇ ಸಾಕ್ಷಿಯು ನನ್ನ ಅಜ್ಜ ಎಪ್ ಡಿ ಇಟ್ಟಿದ್ದು ಅದರಿಂದ ಅವರ ವಿವಾಹ ಮಾಡಿರುತ್ತೇನೆಂದು ನುಡಿಯುತ್ತಾರೆ. ಅಜ್ಜ ಎಂದರೆ ಯಾರು ಎಂದರೆ ಸಾಕ್ಷಿಯು ನನ್ನ ಗಂಡನ ತಂದೆ ಎನ್ನುತ್ತಾರೆ. ತಮ್ಮ ಗಂಡನ ತಂದೆಯೂ ಸಹ ವ್ಯವಸಾಯಗಾರರು ಎಂದರೆ ಸರಿ. ಅವರಿಗೆ ವ್ಯವಸಾಯ ಬಿಟ್ಟು ಬೇರೆ ಉದ್ಯೋಗ ಇರಲಿಲ್ಲ ಎಂದರೆ ಸರಿ. ಸರ್ವೆ ನಂಃ162/1, 162/3 ಬಿಟ್ಟು ಬೇರೆ ಜಮೀನಲ್ಲಿ ವ್ಯವಸಾಯ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಈ ಎರಡೂ ಜಮೀನುಗಳಲ್ಲಿ ಲಾವಣಿ ಆದಾರದ ಮೇಲೆ ವ್ಯವಸಾಯ ಮಾಡಲಾಗುತ್ತಿತ್ತು ಎನ್ನುತ್ತಾರೆ. ನನ್ನ ಅಜ್ಜ 1982 ರಲ್ಲಿ ನನ್ನ ಗಂಡ ಮತ್ತು ನನ್ನ ಹೆಸರಿನಲ್ಲಿ ತಲಾ 50 ಸಾವಿರ ರೂ ಎಪ ಡಿ ಇಟ್ಟಿದ್ದು ನನ್ನ ಒಬ್ಬ ಮಗಳ ವಿವಾಹಕ್ಕೆ ಸಹಿ ಮಾಡಿ ಪಡೆದಿರುತ್ತೇನೆ. ಸದರಿ ಎಪ್ ಡಿ ಗಳು ತಾವು ಹಾಜರುಪಡಿಸಿರುವ ದಾಖಲೆಗಳಲ್ಲಿ ಇರುವ ಎಪ್ ಡಿ ಗಳೆಂದರೆ ಸರಿ. ಈ ಎರಡೂ ಎಪ್ ಡಿ ಗಳನ್ನು ಬಿಟ್ಟು ಬೇರೆ ಎಪ್ ಡಿ ಗಳು ನನ್ನ ಹೆಸರಿನಲ್ಲಿರುವದಿಲ್ಲ. ಪೋಸ್ಟ ಆಪೀಸನಲ್ಲಿ ನನ್ನ ಖಾತೆ ಇದ್ದು ಅದರಲ್ಲಿ 2 ಸಾವಿರ ಹಣವನ್ನು ಎಪ್ ಡಿ ಮಾಡಿದ್ದು ದಾಖಲೆಯನ್ನು ಹಾಜರುಪಡಿಸುತ್ತೇನೆ. ಎಷ್ಟು ವರ್ಷಗಳ ಹಿಂದೆ ಈ ರೀತಿ ಎಪ್ ಡಿ ಮಾಡಿರುತ್ತೀರಿ ಎಂದರೆ ಸಾಕ್ಷಿಯು ದಿನಾಂಕ ನೆನಪಿಲ್ಲ ಹಾಗೂ ವರ್ಷ ಸಹ ನೆನಪಿಗೆ ಬರುತ್ತಿಲ್ಲ ಎನ್ನುತ್ತಾರೆ. ನನ್ನ ಮಗ ವಿಜಯಾ ಬ್ಯಾಂಕನಲ್ಲಿ, ತಾರೀಹಾಳ ಶಾಖೆ ನನ್ನ

ಹೆಸರಿಗೆ ಖಾತೆ ಮಾಡಿಸಿರುತ್ತಾರೆ. ಇದನ್ನು ಬಿಟ್ಟು ಬೇರೆ ಬ್ಯಾಂಕ ಖಾತೆ ಇರುವದಿಲ್ಲ. ಪೋಸ್ಟ ಆಫೀಸನಲ್ಲಿ ಎಷ್ಟು 2 ಸಾವಿರ ರೂ ಗಳ ಎವಿಫ್ ಡಿ ಇದ ಎಂದರೆ ಸಾಕ್ಷಿಯು 1, 2 ಸಾವಿಳಿರ ರೂ ಗಳ ಎಫ್ ಡಿ ಇರುತ್ತದೆಂದು ನುಡಿಯುತ್ತಾರೆ. ಸಾಕ್ಷಿಯು ಯಾವ ವರ್ಷದಲ್ಲಿ ಮಾಡಿಸಿರುತ್ತೀರಿ ಎಂದರೆ ಸಾಕ್ಷಿಯು ನಾನು ಎವಿಫ್ ಡಿ ಮಾಡಿಲ್ಲ ಪೋಸ್ಟ ಅಪೀಸನಲ್ಲಿ ಹಾಗೆಯೇ ಇಟ್ಟಿರುತ್ತೇನೆ ಎನ್ನುತ್ತಾರೆ. ವಿಜಯಾ ಬ್ಯಾಂಕ ಮತ್ತು ಪೋಸ್ಟ ಆಫೀಸನ ಖಾತೆ ಸಂಪೂರ್ಣ ವಿವರ ಕೊಡಲು ತೊಂದರೆ ಇರುವದಿಲ್ಲ. ವಿಜಯಾ ಬ್ಯಾಂಕ ಮತ್ತು ಪೋಸ್ಟ ಆಫೀಸನಲ್ಲಿ ಈ ದಾವೆ ಹಾಕುವಾಗ ಎಷ್ಟು ಹಣ ಇತ್ತು ಎಂದು ಉಲ್ಲೇಖಿಸಿಲ್ಲ ಎಂದರೆ ಸರಿ. ಅದೇ ರೀತಿಯಾಗಿ ಎಷ್ಟು ಎಪ ಡಿ ಇತ್ತು ಎಂದು ತಮ್ಮ ಅಸಲರ್ಜಿಯಲ್ಲಿ ಉಲ್ಲೇಖಿಸಿಲ್ಲ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ತಾವು ತಮ್ಮ ಅಸರ್ಲಾಜಿಯಲ್ಲಿ ಕಟ್ಟಿ ರವರ ಕುಟುಂಬಕ್ಕೆ ಇದ್ದ ಸಾಲದ ಹಣದ ಬಗ್ಗೆ ತಿಳಿಸಿಲ್ಲ ಎಂದರೆ ಸರಿ.

19. ಕಟ್ಟಿ ರವರ ಕುಟುಂಬಕ್ಕೆ ಶೇತ್ಕರಿ ಆದಾಯ ಬಿಟ್ಟು ಬೇರೆ ಯಾವದೇ ಆದಾಯದ ಮೂಲ ಇರಲಿಲ್ಲ ಎಂದರೆ ಸರಿಯಲ್ಲ. ಕಟ್ಟಿ ರವರ ಕುಟುಂಬದಲ್ಲಿ ಮಲ್ಲಪ್ಪನವರು ಕುಟುಬಂದಿಂದ ಹೊರ ಹೋಗಿ ಅಂಗಡಿ ಮಾಡಿ ಸಂಪಾದಿಸಿದ ಉತ್ಪನ್ನ ಬಿಟ್ಟರೆ ಬೇರೆ ಉತ್ಪನ್ನ ಇರಲಿಲ್ಲ ಎಂದರೆ ಸಾಕ್ಷಿಯು ಆತ ಮನೆ ಬಿಟ್ಟು ಹೋಗಿಲ್ಲ ಎನ್ನುತ್ತಾರೆ. ಅವರ ಹೆಸರಿನಲ್ಲಿ ವೈಯಕ್ತಿಕ ಅಂಗಡಿ ಲೈಸನ್ಸ ಇರುತ್ತದೆಂದರೆ ಸಾಕ್ಷಿ ಮೋಸ ಮಾಡಿ ಪಡೆದಿರುತ್ತಾರಂದು ನುಡಿಯುತ್ತಾರೆ. ಮೋಸ ಮಾಡಿ ಪಡೆದೀರುತ್ತಾರೆಂದು ಹೇಳಿ ಯಾವದೇ ತಕರಾರು ಮಾಡಿಲ್ಲ. ಸದರಿ ಮಲ್ಲಪ್ಪನವರು ಅಂಗಡಿಯಿಂದ ಬಂದ ಉತ್ಪನ್ನದಿಂದ ತಾರೀಹಾಳ ಗ್ರಾಮದ ಅನುಸೂಚಿ ಆಸ್ತಿ - ಕ ಗಳಿಸಿರುತ್ತಾರೆಂದರೆ ಸರಿಯಲ್ಲ. ಮಲ್ಲಪ್ಪನ ಹಸರಿನಲ್ಲಿರುವ ಆಸ್ತಿಗೆಳಲ್ಲವೂ ಆತನ ಸ್ವಯಾರ್ಜಿತ ಆಸ್ತಿಗಳೆಂದರೆ ಸರಿಯಲ್ಲ. ಶೇತ್ಕರಿಯಿಂದ ಬರುತ್ತಿದ್ದ ಆದಾಯವು ಸಾಕಾಗದ ಕಾರಣ ಎಲ್ಲಾ ಜಮೀನುಗಳ ಮೇಲೆ ಮನೆತನ ನಡೆಸಲು ಸಾಲ ಮಾಡಿರುತ್ತಾರೆಂದರೆ ಸರಿಯಲ್ಲ. ಸಾಲ ಪಡೆಯುವಾಗ ತಾವಾಗಲಿ , ತಮ್ಮ ಮಕ್ಕಳಾಗಲಿ ಹಾಗೂ ತಮ್ಮ ಗಂಡನಾಗಲಿ ಯಾವದೇ ತಕರಾರು ಮಾಡಿಲ್ಲ ಎಂದರೆ ಸಾಕ್ಷಿಯು ತಕರಾರು ಮಾಡಿಲ್ಲ ಎಂದು ಹಾಗೂ ಸಾಲ ಮಾಡುವ ಅಗತ್ಯತೆ ಬಂದಿರಲಿಲ್ಲ ಎಂದು ನುಡಿಯುತ್ತಾರೆ. ತಮಗೆ ಎಲ್ಲಾ ವಿಚಾರ ಗೊತ್ತಿದ್ದರೂ ಹಾಗೂ ಸಾಲವನ್ನು ಮರುಪಾವತಿಸುವ ಬಾದ್ಯತೆಯಿಂದ ತಪ್ಪಿಸಿಕೊಳ್ಳಲು ಸಾಲದ ವಿಚಾರಗಳನ್ನು ತಿಳಿಸದೇ ಸುಳ್ಳು ವಾಟ್ನೀ ದಾವೆಯನ್ನು ಮಾಡಿರುತ್ತೀರಿ ಎಂದರೆ ಸರಿಯಲ್ಲ. ಸರ್ವೆ ನಂಃ162/1, 162/3 ರ ಮೇಲೆ ಸಾಲವನ್ನು ಹೊರಲು ಆಗದ ಕಾರಣ ತಾವು ಹಾಗೂ ತಮ್ಮ ಮಕ್ಕಳು ಬಸಪ್ಪ ಮತ್ತು ಶಂಕ್ರಪ್ಪನ ಹೆಸರಿಗೆ ನೋಂದಾಯಿತ ಹಕ್ಕು ಬಿಟ್ಟು ಪತ್ರವನ್ನು ಮಾಡಿಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. 2009 ರಿಂದ ಶಂಕ್ರಪ್ಪ ಮತ್ತು ಮಲ್ಲಪ್ಪನವರು ಈ ಎರಡೂ ಆಸ್ತಿಗಳನ್ನು ಸಂಪೂರ್ಣವಾಗಿ ಮಾಲ್ಕೀನಾತೆದಿಂದ ಸ್ವಾದೀನದಲ್ಲಿರುತ್ತಾರೆಂದರೆ ಸರಿಯಲ್ಲ. ಈ ಎರಡೂ ಆಸ್ತಿಗಳು ಭಾಗಕ್ಕೆ

ಅನರ್ಹವಾಗಿದ್ದರೂ ಅವುಗಳನ್ನು ಈ ದಾವೆಯಲ್ಲಿ ಸೇರಿಸಿ ಅನಾವಶ್ಯಕವಾಗಿ ಅವರಿಗೆ ತೊಂದರೆ ಕೊಡುತ್ತಿದ್ದೀರಿ ಎಂದರೆ ಸರಿಯಲ್ಲ. ಮಲ್ಲಪ್ಪನ ಸ್ವಯಾರ್ಜಿತ ಆಸ್ತಿಗಳನ್ನು ಸಹ ಈ ಪ್ರಕರಣದಲ್ಲಿ ಸೇರಿಸಿ ಅವರಿಗೆ ಮತ್ತು ಅವರ ಕುಟುಂಬದವರಿಗೆ ತೊಂದರೆ ಕೊಡುತ್ತಿದ್ದೀರಿ ಎಂದರೆ ಸರಿಯಲ್ಲ. ತಮಗೆ ಈ ದಾವೆ ಹಾಕಲು ಯಾವದೇ ಕಾರಾಣ ಉಂಟಾಗದಿದ್ದರೂ ಬಸಪ್ಪ ಮತ್ತು ಮಲ್ಲಪ್ಪನವರನ್ನು ಅನಾವಶ್ಯಕವಾಗಿ ನ್ಯಾಯಾಲಯಕ್ಕೆ ಅಡ್ಡಾಡುಸುತ್ತಿದ್ದೀರಿ ಎಂದರೆ ಸರಿಯಲ್ಲ. ಪೋಸ್ಟ ಆಪೀಸ ಮತ್ತು ವಿಜಯಾ ಬ್ಯಾಂಕನ ಹಣವನ್ನು ಈ ಪ್ರಕರಣದಲ್ಲಿ ಸೇರಿಸಿಲ್ಲ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**